**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವದುರ್ಗ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂ.651/2023**

ಪಿರ್ಯಾದಿದಾರರು : ಮಾನವಿ ಅಬಕಾರಿ ವಲಯ ಕಛೇರಿ, ಮಾನವಿ.

**ವಿರುದ್ಧ**

ಆರೋಪಿ: 1. ಬೀಬಿ ಗಂಡ ಶರಣಪ್ಪ, ವಯಸ್ಸುಃ 26 ವರ್ಷ,
ಉಃ ಕೂಲಿ, ಸಾಃ ಚೀನನಾಯಕ ತಾಂಡಾ, ತಾಃ ದೇವದುರ್ಗ.

**ಭಾರತ ದಂಡ ಸಂಹಿತೆ ಕಲಂ 313 ರ ರಿತ್ಯಾ ಆರೋಪಿಗಳ ಹೇಳಿಕೆಗಳು**

ಪ್ರಶ್ನೆ-1) ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಕೊಂಡಿದ್ದಿರಾ ?

ಉತ್ತರಃ

ಪ್ರಶ್ನೆ-2) ಫ್ರಾಸಾ-2 ಶಿವಲಿಂಗಸ್ವಾಮಿ ತಂದೆ ಜಯದೇವ ಮೂರ್ತಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10-04-2023 ರಂದು ಸಂಜೆ 5-30 ರ ಸಮಯದಲ್ಲಿ ನಾನು, ಸಿಬ್ಬಂದಿ ಹಾಗೂ ಪಂಚರೊಂದಿಗೆ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅರಕೇರಾದಿಂದ ಸಿರವಾರಕ್ಕೆ ಹೋಗುವ ರಸ್ತೆಯಲ್ಲಿ ರಸ್ತೆ ಗಸ್ತು ಮಾಡುತ್ತಿದ್ದಾಗ ಚೆನ್ನನಾಯ್ಕುತಾಂಡದ ನಿವಾಸಿ ಬೇಬಿ ಗಂಡ ಶರಣಪ್ಪ ಎಂಬುವವರು ತನ್ನ ವಾಸದ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಂಗ್ರಹಣೆ ಮಾಡಿದ್ದಾಳೆ ಎಂಬ ಖಚಿತ ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-3) ಫ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಬಾತ್ಮಿ ಮೇರೆಗೆ ತಕ್ಷಣ ಸದರಿ ತಾಂಡಕ್ಕೆ ಹೋಗಿ ಮನೆಯ ಹತ್ತಿರ ಹೋಗುತ್ತಿದ್ದಂತೆ ಸಮವಸ್ತ್ರದಲ್ಲಿದ್ದ ನಮ್ಮನ್ನು ಮತ್ತು ವಾಹನವನ್ನು ನೋಡಿ ಒಬ್ಬ ಮಹಿಳೆ ಮನೆಯಿಂದ ಓಡಿ ಹೋಗಿದ್ದು

ಹಿಡಿಯಲು ಪ್ರಯತ್ನಿಸಿದ್ಯಾಗ್ಯೂ ಸಿಕ್ಕಿರುವುದಿಲ್ಲ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-4) ಫ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಸ್ಥಳದಲ್ಲಿ ಶೋಧನಾ ಸಮೂಚಿತ ವಾರೆಂಟ್‌ನ್ನು ತಯಾರಿಸಿ ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಮನೆಯನ್ನು ಪರಿಶೀಲನೆ ಮಾಡಲಾಗಿ ಮನೆಯ ಒಂದು ಮೂಲೆಯಲ್ಲಿ 05 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ 05 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿ ಪತ್ತೆಯಾಗಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-5) ಫ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಅದನ್ನು ಪಂಚನಾಮೆ ಮಾಡಿ ಅಮಾನತುಪಡಿಸಿಕೊಂಡಿದ್ದು ಅದರಲ್ಲಿ 800 ಎಂ.ಎಲ್ ನಷ್ಟು ರಾಸಾಯನಿಕ ಪ್ರಯೋಗಾಲಯಕ್ಕಾಗಿ ಮಾದರಿಗಾಗಿ ತೆಗೆದು ಪಂಚರ ಮತ್ತು ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ನಂತರ ಅಮಾನತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿ, ಪಂಚನಾಮೆಯೊಂದಿಗೆ ಕಚೇರಿಗೆ ಬಂದು ದೂರನ್ನು ನೀಡಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-6) ಫ್ರಾಸಾ-4 ಆಂಜನೇಯ್ಯ ತಂದೆ ಕೃಷ್ಣಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 10-04-2023 ರಂದು ಸಾಯಂಕಾಲ 5-30 ರ ಸುಮಾರಿಗೆ ವಿಧಾನ ಸಭಾ ಸಾರ್ವತ್ರಿಕ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಅಬಕಾರಿ ಉಪ ನಿರೀಕ್ಷಕರು ಮತ್ತು ನಾವು ಹಾಗೂ ಪಂಚರೊಂದಿಗೆ ಅರಕೇರಾದಿಂದ ಸಿರವಾರಕ್ಕೆ ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ ಚೆನ್ನನಾಯ್ಕತಾಂಡದ ನಿವಾಸಿಯಾದ ಬೇಬಿ ಗಂಡ ಶರಣಪ್ಪ ಇವರು ತನ್ನ ವಾಸದ ಮನೆಯಲ್ಲಿ

ಅಕ್ರಮ ಕಳ್ಳಭಟ್ಟಿ ಸಾರಾಯಿ ಸಂಗ್ರಹಣೆ ಮಾಡಿರುತ್ತಾರೆ ಎಂಬ ಖಚಿತ ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-7) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಬಾತ್ಮಿ ಮೇರೆಗೆ, ತಕ್ಷಣ ಸದರಿಯವಳ ಮನೆಯ ಹತ್ತಿರ ಹೋಗುತ್ತಿದ್ದಂತೆ ಸಮವಸ್ತ್ರದಲ್ಲಿದ್ದ ನಮ್ಮನ್ನು ಮತ್ತು ಅಧಿಕಾರಿಗಳನ್ನು ನೋಡಿ ಸದರಿ ಮನೆಯಿಂದ ಒರ್ವ ಹೆಣ್ಣು ಮಗಳು ಓಡಿ ಹೋಗಿದ್ದು ಹಿಡಿಯಲು ಪ್ರಯತ್ನಿಸಿದರೂ ದೊರೆತಿರುವುದಿಲ್ಲ. ನಂತರ ಮನೆ ಖುಲ್ಲಾ ಇರುವುದರಿಂದ ಅನುಮಾನಗೊಂಡು ಶೋಧನೆಗಾಗಿ ಶೋಧನಾ ಸಮೂಚಿತ ವಾರೆಂಟ್‌ನ್ನು ತಯಾರಿಸಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-8) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಪಂಚರ ಸಮಕ್ಷಮ ಮನೆಯನ್ನು ಶೋಧನೆ ಮಾಡಲಾಗಿ ಒಂದು ಮೂಲೆಯಲ್ಲಿ 05 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ 05 ಲೀಟರ್ ಕಳ್ಳಭಟ್ಟಿ ಸಾರಾಯಿ ಪತ್ತೆಯಾಗಿದ್ದು ಅದರಲ್ಲಿ 800 ಎಂ.ಎಲ್ ಕಳ್ಳಭಟ್ಟಿ ಸಾರಾಯಿಯನ್ನು ಮಾದರಿಗಾಗಿ ಪ್ರತ್ಯೇಕವಾಗಿ ತೆಗೆಯಲಾಗಿರುತ್ತದೆ. ನಂತರ ಮುದ್ದೆಮಾಲಿನೊಂದಿಗೆ ಠಾಣೆಗೆ ಹಾಜರಾಗಿ ಪ್ರಕರಣ ದಾಖಲಿಸಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-9) ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆ-10) ನೀರು ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ?

ಉತ್ತರಃ

(ಆರೋಪಿಯ ಹೇಳಿಕೆಯನ್ನು ಸ್ವತಃ ನಾನೆ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢಿಕರಿಸಿರುತ್ತೇನೆ).

ದಿನಾಂಕಃ 19-05-2026 ಹಿರಿಯ ಸಿವಿಲ್ ನ್ಯಾಯಾಧೀಶರು
ಸ್ಥಳಃ ದೇವದುರ್ಗ. ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.